# ಪರ್ಯಾಯ ಶೈಕ್ಷಣಿಕ ಯೋಜನೆ–2021-22

**5ನೇ ತರಗತಿ** **ಆಗಸ್ಟ್ ಮಾಹೆ** **ಪ್ರಥಮ ಭಾಷೆ ಕನ್ನಡ**

| ಕ್ರ.ಸಂ | ತಿಂಗಳು/ವಾರ<br>ಪಾಠದ ಹೆಸರು | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 1 | ಆಗಸ್ಟ್<br>1ನೇ ವಾರ | ಪರಿಚಿತ ಸನ್ನಿವೇಶದ ಬಗ್ಗೆ ನಿರರ್ಗಳವಾಗಿ ಮಾತನಾಡುವರು. | • ಮಗು ಸ್ವತಂತ್ರವಾಗಿ ಮಾತನಾಡುವುದಕ್ಕೆ ಮುಕ್ತ ಅವಕಾಶವನ್ನುಕಲ್ಪಿಸುವುದು. ಉದಾ:ಜಾತ್ರೆ,ಹಬ್ಬ ಸ್ಥಳೀಯ ವಿಷಯಗಳ ಬಗ್ಗೆ ಮಾತನಾಡಲು ಪ್ರೇರೇಪಿಸುವುದು.<br>• ಮಗು ತಾನು ಕೇಳಿದ, ತಿಳಿದ ಕಥೆಯನ್ನು ನಿರರ್ಗಳವಾಗಿ ಹೇಳಿ,ಧ್ವನಿ ಮುದ್ರಿಸಿ ಕಳುಹಿಸಲು ಸೂಚಿಸುವುದು. | ಉದಾಹರಣೆಗಳನ್ನು ನೀಡುವುದು ಗಣೇಶಉತ್ಸವ, ದಸರಆಚರಣೆ ವಿಡಿಯೋ ತುಣುಕುಗಳ ಆಲಿಸುವಿಕೆ. |
| 2 | 2ನೇ<br>ವಾರ<br>ಗದ್ಯ ಭಾಗ–1<br>ಒಟ್ಟಿಗೆ<br>ಬಾಳುವ<br>ಆನಂದ | 1.ಧ್ವನಿ ಸುರುಳಿಗಳನ್ನು ಆಲಿಸಿ ಅರ್ಥೈಸಿಕೊಳ್ಳುವರು.<br>2.ಸರಳ ಪ್ರಶ್ನೆಗಳಿಗೆ ಮೌಖಿಕವಾಗಿ ಉತ್ತರಿಸುವರು.<br>3.ಪರಿಚಿತ ಪದಗಳ ಪಟ್ಟಿ ಮಾಡುವರು. | • ಶಿಕ್ಷಕರು 'ಒಟ್ಟಿಗೆ ಬಾಳುವ ಆನಂದ' ಪಾಠದ ಕಥೆಯನ್ನು ಧ್ವನಿ ಏರಿಳಿತಗಳೊಂದಿಗೆ ಹೇಳಿ,ಧ್ವನಿ ಮುದ್ರಿಸಿ ಮಕ್ಕಳು ಆಲಿಸಲು ಸೂಚಿಸುವುದು.<br>• ವಿದ್ಯಾರ್ಥಿಯ ಭೇಟಿಯ ಸಮಯದಲ್ಲಿ ಶಿಕ್ಷಕರು ಪಾಠದ ವಿವರಣೆಯನ್ನು ತಿಳಿಸುವರು.<br>• ಮಕ್ಕಳಿಂದ ಪಾಠ ವಾಚನ ಮಾಡಿಸುವುದು.<br>• ವರ್ಣಮಾಲೆಯನ್ನು ಚೌಕಳಿ ಪುಸ್ತಕದಲ್ಲಿಅಂದವಾಗಿ ನಿಯಮದಂತೆ ಬರೆಯಲು ತಿಳಿಸುವುದು.<br>• ಅ ಯಿಂದ ಳ ವರೆಗಿನ ವರ್ಣಮಾಲೆಗೆ ಒಂದೊಂದು ಪದವನ್ನು ಪಾಠದಿಂದ ಆಯ್ದು ಬರೆಯಲು ಸೂಚಿಸುವುದು. | ಮೌಖಿಕ ಪ್ರಶ್ನೋತ್ತರ<br>ಓದುವಿಕೆ ಪರೀಕ್ಷೆ (ಪಠ್ಯಪುಸ್ತಕ ಬಳಕೆ) |

| | | | | |
|---|---|---|---|---|
| | | 4. ಗುಣಿತಾಕ್ಷರವನ್ನು ಕ್ರಮಬದ್ದವಾಗಿ ಬರೆಯುವರು. | • ದಿನಪತ್ರಿಕೆಯ ಕಥೆಯೊಂದನ್ನು ಸಂಗ್ರಹಿಸಲು ತಿಳಿಸುವುದು.<br>• ಅ ಯಿಂದ ಳ ವರೆಗಿನ ವರ್ಣಮಾಲೆಯನ್ನು ವ್ಯಾಕರಣಬದ್ದವಾಗಿ ಪರಿಚಯಿಸುವುದು.<br>• ಆಯ್ದ ವ್ಯಂಜನಗಳಿಗೆ ಗುಣಿತಾಕ್ಷರ ಬರೆಯುವಂತೆ ಅನುಕೂಲಿಸುವುದು. | 5ನೇ ತರಗತಿ"ಸಿರಿಕನ್ನಡ" ಪಠ್ಯಪುಸ್ತಕದ ಪುಠಸಂಖ್ಯೆ 6&7 ಹಾಗೂ ಸುಮೇರು ಪುಸ್ತಕದ ಪುಟಸಂಖ್ಯೆ 1,2,3 ರ ಅಭ್ಯಾಸದ ಹಾಳೆಗಳು |
| 3 | 3ನೇ ವಾರ | ಪ್ರಕೃತಿ ಸೌಂದರ್ಯವನ್ನು ವರ್ಣಿಸುವುದು | • ಕವಿ ಪರಿಚಯ:ಕವಿ ಕೃತಿಗಳ ಬಗ್ಗೆ ಮಾಹಿತಿ ನೀಡಿ ಕವಿಯ ಭಾವಚಿತ್ರ ಸಂಗ್ರಹಿಸಿ ಕಿರುಪರಿಚಯ ಬರೆಯಲು ತಿಳಿಸುವುದು.<br>• ಶಿಕ್ಷಕರು "ಹುತ್ತರಿ ಹಾಡು" ಪದ್ಯವನ್ನು ಸ್ವರಭಾರಯುಕ್ತವಾಗಿ ಹಾಡಿ ಧ್ವನಿಸುರಳಿ ಮಾಡಿ ಮಕ್ಕಳು ಆಲಿಸುವಂತೆ ಅನುಕೂಲಿಸುವುದು.<br>• ಮಕ್ಕಳ ಭೇಟಿ ಸಂದರ್ಭದಲ್ಲಿ ಶಿಕ್ಷಕರು ಪದ್ಯ ಸಾರಾಂಶವನ್ನು ವಿದ್ಯಾರ್ಥಿಗಳಿಗೆ ವಿವರಿಸುವುದು.<br>• ಹೊಸಪದಗಳ ಅರ್ಥ ತಿಳಿಸುವುದು. | ಪದ್ಯದಲ್ಲಿನ"ಪ್ರಾಸಪದ"ಗಳ ಸಂಗ್ರಹ<br>ಉದಾ:ಹೊಳೆವಳೊ–ಕಳೆವಳೊ,ದೇಶ–ಕೋಶ<br><br>ಪ್ರಶ್ನೋತ್ತರ–ಅಭ್ಯಾಸದ ಹಾಳೆ |
| 4 | 4ನೇ ವಾರ<br><br>ಗುಣಿತಾಕ್ಷರ ಸಂರಚನೆಯನ್ನು ಅರಿಯುವುದು | 1.ಗುಣಿತಾಕ್ಷರದ ಸಂರಚನೆಯನ್ನು ಅರಿಯುವರು.<br>2. ತನವಿಷ್ಟವಾದ ಪ್ರೇಕ್ಷಣೀಯ ಸ್ಥಳದ ಬಗ್ಗೆ ವಿವರಿಸುವರು. | • ಸ್ವರಗಳಿಗೆ ವ್ಯಂಜನಗಳನ್ನು ಕೂಡಿಸಿ ಬರೆಯುವ ಕ್ರಮವನ್ನು ಮಕ್ಕಳಿಗೆ ಹೇಳಿಕೊಡುವುದು.<br>• ಕೊಡಗಿನ ಪ್ರಾಕೃತಿಕ ಸೌಂದರ್ಯ ಮತ್ತು ಕೊಡವರ ಬಗ್ಗೆ ವಿವರಿಸುವುದು.<br>• ಕೊಡಗಿನ ಕೆಲವೊಂದು ಚಿತ್ರಪಟಗಳನ್ನು ಪ್ರದರ್ಶಿಸುವುದು. | 4ನೇ ತರಗತಿ ಸುಮೇರು ಪುಟಸಂಖ್ಯೆ 11,12 ಪಠ್ಯಪುಸ್ತಕದ ಪುಟಸಂಖ್ಯೆ 71,72ರ ಅಭ್ಯಾಸದ ಹಾಳೆಗಳು |

| | | | | |
|---|---|---|---|---|
| | | 2.ಅಕ್ಷರಗಳನ್ನು ಬಿಡಿಸಿ ಬರೆಯುವ ಕ್ರಮವನ್ನು ತಿಳಿಯುವರು.<br><br>3.ಸನ್ನಿವೇಶ ಘಟನೆಗಳನ್ನು ವಿವರಿಸುವರು. | • ಶಿಕ್ಷಕರು ಅಕ್ಷರಗಳನ್ನು ಬಿಡಿಸಿ ಬರೆಯುವ ಕ್ರಮದ ವಿಡಿಯೋ ಒಂದನ್ನು ಮಕ್ಕಳಿಗೆ ವೀಕ್ಷಿಸಲು ತಿಳಿಸುವುದು.<br>• ಮನೆ ಭೇಟಿ ಸಂದರ್ಭದಲ್ಲಿ ಶಿಕ್ಷಕರು ಮಕ್ಕಳಿಗೆ ಅಕ್ಷರಗಳನ್ನು ಬಿಡಿಸಿ ಬರೆಯುವ ಕ್ರಮವನ್ನು ತಿಳಿಸಿಕೊಡುವುದು.<br>• ತಮಗೆ ಇಷ್ಟವಾದ ಸ್ವಾತಂತ್ರ್ಯ ಹೋರಾಟಗಾರರು ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಘಟನೆಯೊಂದನ್ನು ಸ್ವಾರಸ್ಯಕರವಾಗಿ ವಿವರಿಸುವಂತೆ ಪ್ರೋತ್ಸಾಹಿಸುವುದು. | ಸ್ವಾತಂತ್ರ್ಯ ಹೋರಾಟಗಾರರ ಭಾವಚಿತ್ರ ತೋರಿಸಿ ವಿವರಣೆ ಪಡೆಯುವುದು. |

| ಮೊದಲನೇ ರೂಪಣಾತ್ಮಕ ಪರೀಕ್ಷೆ | ಸಿಸಿ ಇ ಅಡಿಯಲ್ಲಿನ ನೀಡಬಹುದಾದ ಚಟುವಟಿಕೆಗಳು |
|---|---|
| ಅಭ್ಯಾಸ ಹಾಳೆಗಳ ಮೌಲ್ಯಮಾಪನ ಹಾಗೂ ಮೌಖಿಕ ಪ್ರಶ್ನೋತ್ತರ | • ದಿನಪತ್ರಿಕೆಗಳಲ್ಲಿರುವ ಮಕ್ಕಳ ಕಥೆಗಳನ್ನು ಸಂಗ್ರಹಿಸುವುದು.<br>• ಕನ್ನಡ ವರ್ಣಮಾಲೆಯನ್ನು ಅಂದವಾಗಿ ಬರೆದು ಚಾರ್ಟ್ ತಯಾರಿಸುವುದು.<br>• ದೇಶಕ್ಕಾಗಿ ಹೋರಾಡಿದ ಕೊಡಗಿನ ವೀರರ ಕುರಿತು ಹಾಡುಗಳನ್ನು ಸಂಗ್ರಹಿಸುವುದು.<br>• ಪಂಜೆ ಮಂಗೇಶರಾವ್ ರವರ ಭಾವ ಚಿತ್ರ ಸಂಗ್ರಹಿಸಿ ಅವರ ಬಗ್ಗೆ 4 ವಾಕ್ಯ ಬರೆಯಲು ತಿಳಿಸುವುದು.<br>• ಕೊಡಗಿನ ಪ್ರಾಕೃತಿಕ ಸನ್ನಿವೇಶ ವಿವರಣೆಯನ್ನು ಹಿರಿಯರೊಂದಿಗೆ ಚರ್ಚಿಸಿ ಬರೆಯಲು ತಿಳಿಸುವುದು. |

**ಅಭ್ಯಾಸಹಾಳೆ – 1** **ಮಾಹೆ : ಆಗಸ್ಟ್**

**ಒಟ್ಟಿಗೆ ಬಾಳುವ ಆನಂದ, ಹುತ್ತರಿಯ ಹಾಡು ಮತ್ತು ವ್ಯಾಕರಣಾಂಶ**

**☛ಸೂಕ್ತ ಉತ್ತರದ ಕೆಳಗೆ ಗೆರೆ ಎಳೆ:**

1. ಬೇವಿನ ಮರವನ್ನು ಜನರು ಹೀಗೆ ಕರೆಯುತ್ತಿದ್ದರು

   ಅ. ಅಮ್ಮನ ಮರ ಆ. ಅಪ್ಪನ ಮರ ಇ. ಅವ್ವನ ಮರ ಈ. ಅಕ್ಕನ ಮರ

2. ಒಟ್ಟಾಗಿ ಬಾಳಿದರೆ ಎಲ್ಲರೂ

   ಅ. ಸೋಮಾರಿಯಾಗಿ ಇರಬಹುದು ಆ. ಸುಖವಾಗಿರಬಹುದು ಇ.ಜಗಳವಾಡಬಹುದು
   ಈ.ಯಾವುದೂ ಇಲ್ಲ

3. ಇದು ಕಾವೇರಿಯ ತವರ್ಮನೆ

   ಅ.ಕೊಡಗು ಆ.ಮೈಸೂರು ಇ. ಮಂಗಳೂರು ಈ.ಶಿವಮೊಗ್ಗ

4. ಇದು ಶ್ರೀ ಪಂಜೆ ಮಂಗೇಶರಾವ್ ರವರ ಕಾವ್ಯನಾಮ

   ಅ. ಆನಂದಕಂದ ಆ. ತೀ.ನಂ.ಶ್ರೀ ಇ. ಪುರಂದರ ವಿಠಲ ಈ. ಕವಿಶಿಷ್ಯ

**☛ಸೂಚನೆಯಂತೆ ಬರೆ:**

1. ಮಾದರಿಯಂತೆ ಬಿಡಿಸಿ ಬರೆ:

   ಮಾದರಿ :ಪರಿಣತಿ = ಪ್+ಅ, ರ್+ಇ, ಣ್+ಅ, ತ್+ಇ

ಅ. ಚೇತನ =

ಆ. ಬಾಯಾರಿಕೆ=

2. ಕೊಟ್ಟ ವ್ಯಂಜನಕ್ಕೆ ಗುಣಿತಾಕ್ಷರ ಬರೆ

   ಅ) ಚ=

   ಆ) ಮ=

ವ್ಯಂಜನಾಕ್ಷರಗಳ ಕೋಷ್ಟಕ ಪೂರ್ಣಗೊಳಿಸಿರಿ.

| ಅಲ್ಪಪ್ರಾಣ | ಮಹಾಪ್ರಾಣ | ಅಲ್ಪಪ್ರಾಣ | ಮಹಾಪ್ರಾಣ | ಅನುನಾಸಿಕ |
|---|---|---|---|---|
| ಕ | | | | |
| | | ಜ | | |
| | | | | ಣ |
| ತ | | | | |
| | | | ಭ | |